# <u>ಕರ್ನಾಟಕ ಸರ್ಕಾರದ ನಡವಳಿ</u>

**ವಿಷಯ:** ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲಾ ಪಂಚಾಯತಿ, ಕಾರವಾರ ಇವರ ಪತ್ರ ಸಂಖ್ಯೆ: ಜಿಪಂಆ/ಗ್ರಾಪಂ/ಹೊ.ಸ.ಅನರ್ಹ/ವಿವ-13/2017-18, ದಿನಾಂಕ 24.10.2017
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 26.12.2017
3) ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 22.01.2018
4) ಇದೇ ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 06.02.2018 ಮತ್ತು 17.02.2018

<u>ಪ್ರಸ್ತಾವನೆ:</u>

ಮೇಲೆ ಓದಲಾದ (1) ರಲ್ಲಿ, ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ ಇವರ ದುರ್ನಡತೆ, ಮೇಲಧಿಕಾರಿಗಳ ಬಗ್ಗೆ ಹಾಗೂ ಪಂಚಾಯತಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು, ಪ್ರತಿ ಸಭೆಯಲ್ಲೂ ಗಲಾಟೆ ಮಾಡುವುದು, ಒಂದು ಸಮುದಾಯದ ಬಗ್ಗೆ ಕೇವಲವಾಗಿ ಮಾತನಾಡಿದ್ದರಿಂದ ಸದರಿಯವರ ವಿರುದ್ಧ ದಿನಾಂಕ 16.10.2015 ರಂದು ಗ್ರಾಮ ಪಂಚಾಯತಿ ಸದಸ್ಯರು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಸದರಿಯವರು ಸಾಮಾನ್ಯ ಸಭೆಗಳಿಗೆ ಹಾಜರಾಗಿ ಗಲಾಟೆ ಮಾಡುತ್ತಿದ್ದು, ಗ್ರಾಮ ಸಭೆ, ವಿಶೇಷ ಸಭೆ ಹಾಗೂ ವಾರ್ಡ್ ಸಭೆಗಳಿಗೆ ಹಾಜರಾಗದೇ ಬೇಜವಾಬ್ದಾರಿ ತೋರಿರುತ್ತಾರೆ. ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೂ ದೂರು ನೀಡಿದ್ದು, ಯಾವುದೇ ಕ್ರಮವಾಗಿರುವುದಿಲ್ಲ, ಆದ್ದರಿಂದ ಇವರ ಸದಸ್ಯತ್ವನ್ನು ರದ್ದುಪಡಿಸಬೇಕೆಂದು ಅಧ್ಯಕ್ಷರು, ಹೊಲನಗದ್ದೆ ಗ್ರಾಮ ಪಂಚಾಯತಿ ಇವರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರ ಸದಸ್ಯತ್ವನ್ನು ರದ್ದುಪಡಿಸುವ ಬಗ್ಗೆ ಹೊಲನಗದ್ದೆ ಗ್ರಾಮ ಪಂಚಾಯತಿ ವಿಶೇಷ ಸಭೆಯಲ್ಲಿ ಬಹುಮತದಿಂದ ನಡವಳಿ ಮಾಡಿ, ಪ್ರತಿ ಸದಸ್ಯರ ಅಭಿಪ್ರಾಯ ಪಡೆದು ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉ.ಕ.ಜಿಲ್ಲೆ ಇವರ ಸದಸ್ಯತ್ವವನ್ನು ಅಧಿನಿಯಮದ ಪ್ರಕರಣ 43ಎ ರಡಿ ಕ್ರಮಜರುಗಿಸಿ ರದ್ದುಪಡಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲಾ ಪಂಚಾಯತಿ ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ ವಿವರಣೆ ನೀಡುವಂತೆ ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

"ತಾವು ಗ್ರಾಮ ಪಂಚಾಯತ ಹೊಲನಗದ್ದೆ ಅಧ್ಯಕ್ಷರ ದೂರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಉತ್ತರ ಕನ್ನಡ ಇವರ ಪತ್ರದಲ್ಲಿ ಉಲ್ಲೇಖಿಸಿದಂತೆ, ನಾನು ಯಾವುದೇ ಒಂದು ಸಭೆಯಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾಗಲಿ ಅಥವಾ ಹಿರಿಯ ಅಧಿಕಾರಿಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದು ಇರುವುದಿಲ್ಲ. ಮತ್ತು ಯಾವುದೇ ಸಮುದಾಯದವರ ವಿರುದ್ಧ ನಾನು ಕೇವಲವಾಗಿ ಮಾತನಾಡಿದ್ದು ಇರುವುದಿಲ್ಲ. ಯಾವುದೇ ಸಮುದಾಯದವರು ನನ್ನ ಮೇಲೆ ಈ ರೀತಿ ಹೇಳಿದ್ದಾಗಲಿ ಅಥವಾ ದೂರು ನೀಡಿದ್ದಾಗಲಿ ಇರುವುದಿಲ್ಲ. ಆದರೆ, ನಾನು ಪಂಚಸಾಯತದಲ್ಲಿ ಅಧ್ಯಕ್ಷರು ಮತ್ತು ಕೆಲ ಸದಸ್ಯರು ಮಾಡುವ ಸ್ವಜನ ಪಕ್ಷಪಾತ, ಭ್ರಸ್ಟಾಚಾರಗಳ ಬಗ್ಗೆ ಸಭೆಯಲ್ಲಿ ಮಾತನಾಡಿದ್ದಲ್ಲದೇ ಆಧಾರ ಸಹಿತ ಮೇಲಾಧಿಕಾರಿಗಳಿಗೆ ದೂರು ನೀಡಿ ಮಾಧ್ಯಮಗಳ ಮುಖಾಂತರ ಬಯಲಿಗೆಳೆದು ಇರುತ್ತದೆ. ಇವರ ಭ್ರಷ್ಟಾಚಾರಕ್ಕೆ ನಾನು ತುಂಬಾ ತಡೆಯೊಡ್ಡುತ್ತಿರುವುದರಿಂದ, ದುರುದ್ದೇಶಪೂರ್ವಕವಾಗಿ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಈ ದೂರಿನ ಅನ್ವಯ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ, ಮೌಖಿಖ ಹೇಳಿಕೆಯನ್ನು ಪಡೆದು ಇದು ಸತ್ಯಕ್ಕೆ ದೂರವಾಗಿದೆಯೆಂದು ಅರ್ಥೈಸಿಕೊಂಡು ದೂರು ನೀಡಿದ ಸದಸ್ಯರನ್ನು ಮತ್ತು ನಮ್ಮನ್ನು ಕರೆಸಿ ಸಮಕ್ಷಮ ವಿಚಾರಿಸುತ್ತೇನೆ ಎಂದು ಹೇಳಿಕಳುಹಿಸಿದ್ದರು. ಮತ್ತೆ ಈ ಬಗ್ಗೆ ಮುಂದೆಂದು ನನ್ನುನ್ನು ಠಾಣೆಗೆ ಕರೆಸಿದ್ದು ಇರುವುದಿಲ್ಲ, ಮತ್ತು ಯಾವುದೇ ಲಿಖಿತ ಹೇಳಿಕೆಯನ್ನು ತೆಗೆದುಕೊಂಡಿದ್ದು ಇರುವುದಿಲ್ಲ.
ಈ ಹಿಂದೆ ಇದೇ ರೀತಿ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳಿಗೆ ಪಂಚಾಯತದ ಇದೇ ಸದಸ್ಯರುಗಳು ಇದೇ ರೀತಿ ದೂರು ನೀಡಿದಾಗ, ಅವರು ಮಾಡಿದ ತನಿಖೆಯ ಸಂದರ್ಭದಲ್ಲಿ ನಾನು ನನ್ನ ಲಿಖಿತ ಉತ್ತರವನ್ನು ನೀಡಿರುತ್ತೇನೆ. ಇಷ್ಟಿದ್ದಾಗಿಯೂ ಕೂಡ ಪಂಚಾಯತದಲ್ಲಿ ಭ್ರಸ್ಟಾಚಾರ, ಗೂಂಡಾಗಿರಿ, ವರ್ತನೆಗಳು ಜಾಸ್ತಿಯಾಗಿದ್ದು, ದಯಮಾಡಿ ಪಾರದರ್ಶಕತೆಗಾಗಿ ನಮ್ಮ ಪಂಚಾಯತಿಗೆ ಸಿ.ಸಿ.ಟಿವಿ. ಅಳವಡಿಸಿ ಎಂದು ನಾನು ಚುನಾಯಿತನಾದ ಆರು ತಿಂಗಳಿಂದಲೇ ತಾಲ್ಲೂಕು ಪಂಚಾಯತ ಕಾರ್ಯನಿರ್ವಹಕ ಅಧಿಕಾರಿಗಳು, ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಇವರಿಗೆ ಹಲವು ಬಾರಿ ಮನವಿ ನೀಡಿದ್ದು ಇರುತ್ತದೆ. ಅದರ ಬಗ್ಗೆ ಗಮನ ಹರಿಸದೇ ನಮ್ಮ ಪಂಚಾಯತದಲ್ಲಿ ನಡೆದಿರುವ ಭ್ರಸ್ಟಾಚಾರ, ಸ್ವಜನಪಕ್ಷಪಾತಗಳನ್ನು ವಿರೋಧಿಸಿದ ನನ್ನ ಮೇಲೆ ಸಾಕ್ಷ್ಯವೇ ಇಲ್ಲದ ಕೇವಲ ಹನ್ನೆರಡು ಮಂದಿ ಸದಸ್ಯರ ಹೇಳಿಕೆ ಮತ್ತು ಠರಾವನ್ನೇ ಸಾಕ್ಷಿಯಾಗಿಟ್ಟುಕೊಂಡು ಈ ದುರುದ್ದೇಶ ಪೂರ್ವಕ ದೂರಿಗೆ ಜನರಿಂದ ಆಯ್ಕೆಯಾದ ನನ್ನ ಮೇಲೆ ಈ ರೀತಿ ಸದಸ್ಯತ್ವ ರದ್ಧತಿಗೆ ಬರೆದಿರುವುದು ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಟ್ಟಿರುವ ನನಗೆ ತುಂಬಾ ಆಘಾತವಾಗಿದೆ. ದಯಮಾಡಿ, ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ನಂತರ ಯಾವುದೇ ಕ್ರಮ ಕೈಗೊಳ್ಳಲು ನನ್ನ ಅಭ್ಯಂತರವಿಲ್ಲ.

ಈ ಹನ್ನೆರಡು ಮಂದಿ ಸದಸ್ಯರು ಸೇರಿ ಇವರ ಭ್ರಷ್ಟಾಚಾರಕ್ಕೆ ಮತ್ತು ಕಾನೂನನ್ನು ಗಾಳಿಗೆ ತೂರಿ ಕೆಲಸ ಮಾಡುವುದಕ್ಕೆ ನಾನು ಅಡ್ಡಗಾಲಾಗುತ್ತೇನೆಂಬ ಕಾರಣಕ್ಕೆ ನನ್ನ ಮೇಲೆ ಈ ರೀತಿ ಆರೋಪ ಮಾಡುತ್ತಾರೆಯೇ ವಿನಃ ಇದು ಸತ್ಯಕ್ಕೆ ದೂರವಾದ ಆರೋಪವಾಗಿರುತ್ತದೆ. ನಾನು ಮಾಡಿದ ಆರೋಪಕ್ಕೆ ಸಾಕ್ಷಿಯನ್ನು ನಾನು ಒದಗಿಸಬಲ್ಲೆನು. ದಯಮಾಡಿ ಈ ಮೂಲಕ ನಾನು ವಿನಂತಿಸುವುದೇನೆಂದರೆ, ಜನರಿಂದ ಆಯ್ಕೆಯಾಗಿ ಸತ್ಯತೆಯಿಂದ ಜನಸೇವೆ ಮಾಡುತ್ತಿರುವ ನನ್ನ ಮೇಲೆ ಈ ಹನ್ನೆರಡು ಮಂದಿ ಸದಸ್ಯರ ನಿರಾಧಾರ ಆರೋಪಕ್ಕೆ ಬೆಲೆಕೊಟ್ಟು ಯಾವುದೇ ಕ್ರಮ ಕೈಗೊಳ್ಳಬಾರದೆಂದು ವಿನಂತಿಸಿರುತ್ತಾರೆ."

ಮೇಲೆ ಓದಲಾದ (4) ರನ್ವಯ, ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ಯವರ ನ್ಯಾಯಾಲಯದಲ್ಲಿ ದಿನಾಂಕ 17.02.2018 ಮತ್ತು 02.03.2018 ರಂದು ವಿಚಾರಣೆ ಜರುಗಿಸಲಾಗಿದೆ. ಸದರಿ ವಿಚಾರಣೆಗೆ ಎರಡೂ ದಿನವೂ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಜರಾಗಿರುವುದಿಲ್ಲ. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಜರಾಗಿರುತ್ತಾರೆ. ಮೇಲಧಿಕಾರಿಗಳ ಬಗ್ಗೆ ಹಾಗೂ ಪಂಚಾಯತಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು, ಪ್ರತಿ ಸಭೆಯಲ್ಲೂ ಗಲಾಟೆ ಮಾಡುವುದು, ಒಂದು ಸಮುದಾಯದ ಬಗ್ಗೆ

ಕೇವಲವಾಗಿ ಮಾತನಾಡಿರುವದಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ತಿಳಿಸಿರುತ್ತಾರೆ. ಅಲ್ಲದೆ, ದಿನಾಂಕ 16.10.2015 ರಂದು ಗ್ರಾಮ ಪಂಚಾಯತಿ ಸದಸ್ಯರು ಸದರಿಯವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಈ ಬಗ್ಗೆ ವಿಶೇಷ ಸಭೆ ನಡೆಸಿ ಪ್ರತಿ ಸದಸ್ಯರ ಅಭಿಪ್ರಾಯ ಪಡೆದು ಸದರಿ ಆಪಾದಿತ ಸದಸ್ಯರನ್ನು ತೆಗೆದುಹಾಕುವ ಬಗ್ಗೆ ಬಹುಮತದಿಂದ ನಿರ್ಣಯಿಸಿರುವುದಾಗಿ ತಿಳಿಸಿ ವೀಡಿಯೋ ದಾಖಲೆ ಹಾಜರುಪಡಿಸಿರುತ್ತಾರೆ.

ಸರ್ಕಾರವು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ, ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಮೇಲಧಿಕಾರಿಗಳು ಹಾಗೂ ಪಂಚಾಯತಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು, ಪ್ರತಿ ಸಭೆಯಲ್ಲೂ ಗಲಾಟೆ ಮಾಡುವುದು, ಒಂದು ಸಮುದಾಯದ ಬಗ್ಗೆ ಕೇವಲವಾಗಿ ಮಾತನಾಡುವುದು, ಸದರಿಯವರು ಸಾಮಾನ್ಯ ಸಭೆಗಳಿಗೆ ಹಾಜರಾಗಿ ಗಲಾಟೆ ಮಾಡುವುದು, ಗ್ರಾಮ ಸಭೆ, ವಿಶೇಷ ಸಭೆ ಹಾಗೂ ವಾರ್ಡ್ ಸಭೆಗಳಿಗೆ ಹಾಜರಾಗದೇ ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ, ಸದರಿಯವರ ಸದಸ್ಯತ್ವವನ್ನು ರದ್ದುಗೊಳಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 870 ಗ್ರಾಪಂಅ 2017 ಬೆಂಗಳೂರು, ದಿನಾಂಕ: 06.04.2018**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರು ಮೇಲಧಿಕಾರಿಗಳು ಹಾಗೂ ಪಂಚಾಯತಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದು, ಪ್ರತಿ ಸಭೆಯಲ್ಲೂ ಗಲಾಟೆ ಮಾಡುವುದು, ಒಂದು ಸಮುದಾಯದ ಬಗ್ಗೆ ಕೇವಲವಾಗಿ ಮಾತನಾಡುವುದು, ಸದರಿಯವರು ಸಾಮಾನ್ಯ ಸಭೆಗಳಿಗೆ ಹಾಜರಾಗಿ ಗಲಾಟೆ ಮಾಡುವುದು, ಗ್ರಾಮ ಸಭೆ, ವಿಶೇಷ ಸಭೆ ಹಾಗೂ ವಾರ್ಡ್ ಸಭೆಗಳಿಗೆ ಹಾಜರಾಗದೇ ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ ರನ್ವಯ ಕ್ರಮ ಜರುಗಿಸಿ, ಸದರಿಯವರನ್ನು ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕು, ಹೊಲನಗದ್ದೆ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**

1) ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತಿ, ಕಾರವಾರ.
3) ಕಾರ್ಯನಿರ್ವಾಹಕ ಅಧಿಕಾರಿ, ಕುಮಟಾ ತಾಲ್ಲೂಕು ಪಂಚಾಯತಿ, ಕುಮಟಾ, ಉತ್ತರ ಕನ್ನಡ ಜಿಲ್ಲೆ. (ಸದರಿಯವರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
4) ಶ್ರೀ ಮಾರುತಿ ಲಕ್ಷ್ಮೀನಾರಾಯಣ ಶೆಟ್ಟಿ, ಸದಸ್ಯರು, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊಲನಗದ್ದೆ ಗ್ರಾಮ ಪಂಚಾಯತಿ, ಕುಮಟಾ ತಾ., ಉತ್ತರ ಕನ್ನಡ ಜಿ.
6) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7) ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.